ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-4, January - February 2026, Pp. 9-18
©*IIMRD*, Mysuru

IIMRD JOURNALS

www.iimrd.com

# ಜಾಗತಿಕ ಮಾರುಕಟ್ಟೆ ಮತ್ತು ದಲಿತ ಉದ್ಯಮಶೀಲತೆ

**ದೀಪು ಪ್ರಸಾದ್ ಸಿ**

ಸಂಶೋಧಕರು, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರ, ಮಾನಸಗಂಗೋತ್ರಿ, ಮೈ.ವಿ.ವಿ., ಮೈಸೂರು

**ಸಾರಾಂಶ: (Abstract)**

*ಜಾಗತೀಕರಣದ ಇಂದಿನ ಯುಗದಲ್ಲಿ ದಲಿತರು ಉದ್ಯಮಿಗಳಾಗಿ ಮಾರುಕಟ್ಟೆ ಪ್ರವೇಶ ಮಾಡಿರುವುದು ಸಾಮಾಜಿಕವಾಗಿ ಒಂದು ಬದಲಾವಣೆಯನ್ನು ಸೂಚಿಸುತ್ತದೆ. ಆ ಮೂಲಕ ಇತರ ಸಮುದಾಯಗಳಿಗಿಂತ ತಾವು ಜಾಗತೀಕ ಮಾರುಕಟ್ಟೆ ಪೈಪೋಟಿಯನ್ನು ನೀಡಬಲ್ಲೆವು ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಆದಾಗ್ಯೂ ಭಾರತದಂತಹ ದೇಶವು ತನ್ನ ಸಾಂಪ್ರದಾಯಿಕತ್ವದ ಧೋರಣೆಗಳಿಂದ ಸಮಾಜದಲ್ಲಿ ಶೋಷಣೆಯನ್ನು ಅನುಭವಿಸುತ್ತಿವೆ. ಇಂತಹ ಕಾರಣಗಳಿಂದ ದಲಿತ ಸಮುದಾಯವು ಆರ್ಥಿಕತೆಯಲ್ಲಿ ಹಿನ್ನಡೆಯನ್ನು ಅಥವಾ ಹಣಕಾಸಿನ ಕೊರತೆ, ಕೌಶಲ್ಯಾಭಿವೃದ್ಧಿ ತರಬೇತಿ ಪಡೆಯದೇ ಇರುವುದು, ಯೋಜನೆಗಳ ಮಾಹಿತಿ ಕೊರತೆ, ಮಾರುಕಟ್ಟೆ ವಹಿವಾಟಿನ ಬಗ್ಗೆ ಅರಿವಿನ ಕೊರತೆ, ತಂತ್ರಜ್ಞಾನದ ಅಳವಡಿಕೆಯಲ್ಲಿ ನಿಧಾನಗತಿ, ಸಮುದಾಯದ ಬೆಂಬಲದ ಕೊರತೆ ಹೀಗೆ ವಿವಿಧ ರೀತಿಯಲ್ಲಿ ದಲಿತ ಉದ್ಯಮಿಗಳು ವ್ಯಾಪಾರೀ ಪೈಪೋಟಿಯ ಜೊತೆಗೆ ಸದಾವಕಾಶಗಳು ಮತ್ತು ಸವಾಲುಗಳನ್ನು ಎದುರಿಸುತ್ತಿದ್ದಾರೆ. ಅಷ್ಟೇ ಅಲ್ಲದೇ ಜಾಗತಿಕ ಮಾರುಕಟ್ಟೆಯಲ್ಲಿ ನೆಲೆಗೊಳ್ಳುವ ತವಕದಲ್ಲಿ ಪ್ರಾಪಂಚಿಕವಾಗಿ ತಮ್ಮನ್ನು ತಾವು ಗುರಿತಿಸಿಕೊಳ್ಳುವ ಮತ್ತು ಯಶಸ್ವಿಯಾಗುವ ಸನಿಹದಲ್ಲಿ ಇದ್ದಾರೆಯೇ ಎಂಬ ಹಲವು ಪ್ರಶ್ನೆಗಳನ್ನು ಪ್ರಸ್ತುತ ಲೇಖನದಲ್ಲಿ ಚರ್ಚಿಸಲಾಗಿದೆ.*

**ಮುಖ್ಯಪದಗಳು (Keywords):** *ದಲಿತ, ದಲಿತ ಉದ್ಯಮಶೀಲತೆ, ಜಾಗತಿಕ ಮಾರುಕಟ್ಟೆ, ಭಾರತ, ಸಾಂಪ್ರದಾಯಿಕತ್ವ*

## ಪೀಠಿಕೆ

ಜಾಗತಿಕ ಮಾರುಕಟ್ಟೆ ಎನ್ನುವುದು ದೇಶ ವಿದೇಶಗಳಲ್ಲಿನ ಗ್ರಾಹಕರ ಅಭಿರುಚಿಗೆ ಅವಶ್ಯವಿರುವ ಅಗತ್ಯತೆಗಳನ್ನು ಪೂರೈಸುವ ಸಲುವಾಗಿ ಗುಣಮಟ್ಟವುಳ್ಳ ಸರಕು–ಸೇವೆಗಳನ್ನು ತಲುಪುವಂತೆ ಮಾಡುವ ಒಂದು ಸುಸಜ್ಜಿತವಾದ ವ್ಯಾಪಾರೀ ಸ್ಥಳವಾಗಿದೆ. ಇಲ್ಲಿ ಒಂದು ದೇಶದ ಸರಕುಗಳು, ತಂತ್ರಜ್ಞಾನ, ಷೇರುಗಳು, ಮಾನವಸಂಪನ್ಮೂಲ, ಮಿಲಿಟರಿ ಸೇವೆಗಳು ಮತ್ತು ವಿಶೇಷವಾಗಿ ಹಣಕಾಸು ವಿನಿಮಯ ಮಾರುಕಟ್ಟೆ ವ್ಯವಸ್ಥೆಯನ್ನು ಕಾಣಬಹುದಾಗಿದೆ. ತಂತ್ರಜ್ಞಾನ, ಆ ಮೂಲಕ ರಾಷ್ಟ್ರ–ರಾಷ್ಟ್ರಗಳ ನಡುವಣ ಉತ್ತಮ ಸಂಬಂಧವನ್ನು ಹೆಚ್ಚಿಸುವಂತೆ ಮಾಡಿದೆ. ಇಂತಹ ಒಂದು ವ್ಯಾಪಾರೀ ಸ್ಥಳದಲ್ಲಿ ದಲಿತ

*Please cite this article as:* ದೀಪು ಪ್ರಸಾದ್, ಸಿ. (2026). ಜಾಗತಿಕ ಮಾರುಕಟ್ಟೆ ಮತ್ತು ದಲಿತ ಉದ್ಯಮಶೀಲತೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(4). ಪು.ಸಂ.* 9–18

ಉದ್ಯಮಶೀಲತೆಯ ಒಳಗೊಳ್ಳುವಿಕೆಯನ್ನು ಗಮನಿಸುವುದು ಮುಖ್ಯವೆನಿಸಿದೆ. ಗ್ರಾಹಕರ ಅಗತ್ಯತೆಗಳನ್ನು/ಬೇಡಿಕೆಗಳನ್ನು ಪೂರೈಸುವ ಸಲುವಾಗಿ ತನ್ನ ಉದ್ದಿಮೆಯಲ್ಲಿ ಕೌಶಲ್ಯತೆ ಮತ್ತು ನಾವಿನ್ಯತೆಯನ್ನು ಬಳಸಿ ಉತ್ಪಾದನಾ ಸರಕನ್ನು ಮಾರಾಟ ಮಾಡುವ ನಡೆಸುವ ಒಟ್ಟಾರೆ ಪ್ರಕ್ರಿಯೆಯು ಉದ್ಯಮಶೀಲತೆ ಆಗಿದೆ. ಮುಂದುವರಿದು ದಲಿತ ಉದ್ಯಮಶೀಲತೆ ಎಂಬುದು ಯಾವುದೇ ಒಂದು ದೇಶದಲ್ಲಿ ತನ್ನ ಜಾತಿ, ಆರ್ಥಿಕ ಹಿನ್ನಡೆಯ ಕಾರಣದಿಂದಾಗಿ ಸಾಮಾಜಿಕವಾಗಿ ಹಿಂದುಳಿದಿರುವ ವ್ಯಕ್ತಿ ಅಥವಾ ಸಮುದಾಯದವರು ತಮ್ಮ ಕುಟುಂಬವನ್ನು ಸದೃಡಗೊಳಿಸುವ ಸಲುವಾಗಿ ಸ್ವ–ಉದ್ಯೋಗವನ್ನು ಸೃಷ್ಟಿಸಿಕೊಂಡು ವ್ಯಾಪಾರ ವಹಿವಾಟನ್ನು ಯಶಸ್ವಿಯಾಗಿ ನಡೆಸುವ ವ್ಯವಸ್ಥೆಯಾಗಿದೆ. ದೇಶದಲ್ಲಿ ಬಹುಪಾಲು ಜನಸಂಖ್ಯೆಯನ್ನು ಹೊಂದಿರುವ ದಲಿತ ಸಮುದಾಯಗಳು ತಮ್ಮ ಮೂಲ ವೃತ್ತಿಯನ್ನೇ ಅವಲಂಭಿಸಿ ಬದುಕುತ್ತಿರುವುದನ್ನು ಇತಿಹಾಸದ ಪುಟಗಳು ನಮಗೆ ತಿಳಿಸುತ್ತವೆ. ಆದರೆ ಅಭಿವೃದ್ದಿಯನ್ನು ಬಯಸಿದ ಈ ಸಮುದಾಯಗಳು ಜಾಗತೀಕರಣವಾದಂತೆ ಉದ್ಯಮದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ತಾವು ಕೂಡ ಜಾಗರೀಕ ಮಾರುಕಟ್ಟೆಯಲ್ಲಿ ಪೈಪೋಟಿಯನ್ನು ನೀಡಬಲ್ಲೆವು ಎಂಬುದನ್ನು ತೋರಿಸಿಕೊಟ್ಟಿವೆ. ಆದಾಗ್ಯೂ ದಲಿತ ಉದ್ಯಮಿಗಳನ್ನು ಉತ್ತೇಜಿಸಿ, ಪ್ರೋತ್ಸಾಹಿಸುವಲ್ಲಿ ಅನೇಕ ಸಮಸ್ಯೆಗಳು ಇರುವುದನ್ನು ಸಹಾ ಕಾಣಬಹುದು.

ಜಾಗತಿಕ ಮಾರುಕಟ್ಟೆ ಮತ್ತು ದಲಿತ ಉದ್ಯಮಶೀಲತೆಯು ಪರಸ್ಪರ ಒಂದಕ್ಕೊಂದು ಪೂರಕವಾಗಿವೆ. ಒಂದು ಮಾರುಕಟ್ಟೆ ವ್ಯವಸ್ಥೆಯಲ್ಲಿ ಏಕಮುಖ ವ್ಯಾಪಾರವು ನಡೆಯಲೂ ಸಾಧ್ಯವಿಲ್ಲ. ಅಂತೆಯೇ ಒಂದೇ ಸಮುದಾಯಕ್ಕೆ ಅಥವಾ ಲಿಂಗಕ್ಕೆ ಸಂಬಂಧಿಸಿದ ವ್ಯಾಪಾರ ವಹಿವಾಟುಗಳು ಕೂಡ ನಡೆಯಲು ಸಾಧ್ಯವಿಲ್ಲ. ಇಲ್ಲಿ ಖರೀದಿದಾರರು ಅಥವಾ ಮಾರಾಟಗಾರರು ಇಬ್ಬರನ್ನು ಕಾಣಬಹುದು. ಹೀಗಿರುವಾಗ ಜಾಗತಿಕ ಮಾರುಕಟ್ಟೆಯಲ್ಲಿ ದಲಿತ ಉದ್ಯಮಶೀಲತೆಯನ್ನು ಹೊರತುಪಡಿಸಿ ವ್ಯವಹರಿಸಲು ಆಗುವುದಿಲ್ಲ ಮತ್ತು ಯಾವುದೇ ವ್ಯಾಪಾರವು ಜಾತಿ ಕೇಂದ್ರಿತವಾಗಿಯೂ ಇರುವುದಿಲ್ಲ. ಪ್ರಸ್ತುತ ಲೇಖನವು ಜಾಗತಿಕ ಮಾರುಕಟ್ಟೆಯಲ್ಲಿ ದಲಿತ ಉದ್ಯಮಶೀಲತೆಯ ಒಳಗೊಳ್ಳುವಿಕೆಯ ಒಟ್ಟಾರೆ ಚಿತ್ರಣವನ್ನು ತೆರೆದಿಡುವ ಪ್ರಯತ್ನವನ್ನು ಮಾಡಲಾಗಿದ್ದು, ಪ್ರಾಥಮಿಕ ಮತ್ತು ದ್ವಿತೀಯ ಸಂಶೋಧನಾ ಮೂಲದ ಅನ್ವಯ ಮಾಹಿತಿಯನ್ನು ಪಡೆಯಲಾಗಿದೆ.

**ಅಧ್ಯಯನದ ಉದ್ದೇಶಗಳು**

ಪ್ರಸ್ತುತ ಲೇಖನವು ಜಾಗತಿಕ ಮಾರುಕಟ್ಟೆ ಮತ್ತು ದಲಿತ ಉದ್ಯಮಶೀಲತೆಯ ಕುರಿತುದಾದ್ದರಿಂದ ಜಾಗತಿಕ ಮಾರುಕಟ್ಟೆಯಲ್ಲಿ ಆಗುವ ವಹಿವಾಟಿನ ಕುರಿತಾದ ಚರ್ಚೆ ಮತ್ತು ಜಾಗತಿಕ ಮಾರುಕಟ್ಟೆಯು ದಲಿತ ಉದ್ಯಮಶೀಲತೆಗೆ ಹೇಗೆ ಪೂರಕವಾಗಿದೆ ಎಂಬುದನ್ನು ತಿಳಿಯುವುದು ಮುಖ್ಯವೆನಿಸಿದೆ. ಈ ನಿಟ್ಟಿನಲ್ಲಿ ಕೆಳಕಂಡ ಕೆಲವು ಅಂಶಗಳನ್ನು ದಾಖಲಿಸಿಲಾಗಿದೆ. ಅವೆಂದರೆ,

1. ಜಾಗತಿಕ ಮಾರುಕಟ್ಟೆಯ ಪ್ರಾಮುಖ್ಯತೆಯ ಕುರಿತು ಅಧ್ಯಯನ ನಡೆಸುವುದು.
2. ಜಾಗತಿಕ ಮಾರುಕಟ್ಟೆಯು ದಲಿತ ಉದ್ಯಮಶೀಲತೆಗೆ ಪೂರಕವಾಗಿದೆಯೇ ಎಂಬುದನ್ನು ತಿಳಿಯುವುದು.

3. ದಲಿತ ಉದ್ಯಮಶೀಲತೆಯ ಕಾರಣವಾಗಿ ದೇಶದಲ್ಲಿ ಸಾಮಾಜಿಕ ವ್ಯವಸ್ಥೆಯ ಆರೋಗ್ಯ ಸುಧಾರಿಸುತ್ತದೆಯೇ ಎಂಬುದನ್ನು ತಿಳಿಯುವುದು.
4. ಜಾಗತೀಕ ಮಾರುಕಟ್ಟೆಯಲ್ಲಾಗುವ ವ್ಯಾಪಾರೀ ಪೈಪೋಟಿಯು ನೈಜ ಉದ್ದಿಮೆದಾರರ ವಹಿವಾಟಿಗೆ ಮಾರಕವಾಗುವುದೇ ಎಂಬುದನ್ನು ತಿಳಿಯುವುದು.

**ಜಾಗತಿಕ ಮಾರುಕಟ್ಟೆ**

ಸಾಮಾನ್ಯವಾಗಿ ಜಾಗತಿಕ ಮಾರುಕಟ್ಟೆ ಎಂದರೆ ಕೊಳ್ಳುವವರು ಮತ್ತು ಮಾರಾಟಗಾರರು ಗ್ರಾಹಕರ ಅಭಿರುಚಿಗೆ ತಕ್ಕಂತೆ ಸರಕುಗಳನ್ನು ಯಶಸ್ವಿಯಾಗಿ ವಿನಿಮಯ ಮಾಡಿಕೊಳ್ಳುವ ಒಂದು ನಿರ್ದಿಷ್ಟ ಸ್ಥಳವಾಗಿದೆ. ಆದರೆ ಮಾರುಕಟ್ಟೆಯ ಅಧ್ಯಯನದ ಅನುಸಾರ ಜಾಗತಿಕ ಮಾರುಕಟ್ಟೆ ಎಂದರೆ ಒಂದು ದೇಶದ ಅಥವಾ ವಿವಿಧ ದೇಶಗಳ ನಡುವಣ ವ್ಯಾಪಾರ, ಹಣಕಾಸು, ಕಾರ್ಮಿಕರು ಮತ್ತು ತಂತ್ರಜ್ಞಾನದ ವಿನಿಮಯವನ್ನು ಪರಸ್ಪರ ಒಮ್ಮತದ ಮೂಲಕ ಅನುವುಮಾಡಿಕೊಡುವ ವ್ಯವಸ್ಥೆ ಆಗಿದೆ. ಪ್ರಾಚೀನ ಕಾಲದಿಂದಲೂ ಮಾರುಕಟ್ಟೆ ವ್ಯವಸ್ಥೆಯು ಪ್ರಪಂಚದಾದ್ಯಂತ ತನ್ನ ಬೇರುಗಳನ್ನು ಹೊಂದಿದ್ದು, 18 ಮತ್ತು 19ನೇ ಶತಮಾನದ ನಂತರದಲ್ಲಿ ಸಾರಿಗೆ, ಸಂವಹನ, ತಂತ್ರಜ್ಞಾನದ ಪ್ರಗತಿಯಿಂದ ಪ್ರಾಂಪಚಿಕವಾಗಿ ವ್ಯಾಪಾರ ವಹಿವಾಟನ್ನು ನಡೆಸಲು ಜಾಗತೀಕರಣದ ಅವಶ್ಯಕತೆಯನ್ನು ಹೆಚ್ಚಿಸಿತು. ಇದರ ಜೊತೆಗೆ 1925–1932 ರ ಸಮಯದಲ್ಲಿ ಅಮೇರಿಕಾದ ನ್ಯೂಯಾರ್ಕ್ ನಗರದ 'Wall Street' ನಲ್ಲಿ ಆದಂತಹ ಷೇರು ಕುಸಿತ, ಬ್ಯಾಂಕ್ ದಿವಾಳಿಯ ಕಾರಣದಿಂದ ಜಾಗತಿಕ ಅಲೆ ಪ್ರಾರಂಭವಾಯಿತು. ಷೇರು ಹೂಡಿಕೆಯಿಂದ ಲಾಭ ಮಾತ್ರವಲ್ಲದೆ ನಷ್ಟದ ಪರಿಣಾಮವೂ ಅರಿವಾಯಿತು. ಪರಸ್ಪರ ಸಹಕಾರ ಮತ್ತು ನಂಬಿಕೆಯ ಮೂಲಕ ಪ್ರಪಂಚಾದಾದ್ಯಂತ ವ್ಯಾಪಾರ ವಹಿವಾಟು ನಡೆಸಬೇಕಾದ ಅನಿವಾರ್ಯತೆ ಸೃಷ್ಟಿಯಾಯಿತು. ಇಂದು ಜಗತ್ತಿನ ಎಲ್ಲಾ ಭಾಗಗಳಿಂದ ಸರಕು, ತಂತ್ರಜ್ಞಾನವು ಸುಲಭವಾಗಿ ವಿನಿಮಯ ಮಾಡುವುದಕ್ಕೆ ಸಾಧ್ಯವಾಗಲು ಇತಿಹಾಸ ಸೇರಿದ ಇಂತಹ ಅನೇಕ ಉದಾಹರಣೆಗಳು ಕಾಣಸಿಗುತ್ತವೆ.

**ಜಾಗತಿಕ ಮಾರುಕಟ್ಟೆಯ ಪ್ರಾಮುಖ್ಯತೆ**

ಜಾಗತಿಕ ಮಾರುಕಟ್ಟೆಯು ದೇಶ ವಿದೇಶಗಳ ನಡುವಣ ವ್ಯಾಪಾರಿ ಸಂಬಂಧವನ್ನು ಹೆಚ್ಚಿಸಿಕೊಂಡು ಕೆಲವೊಮ್ಮೆ ರಕ್ಷಣಾತ್ಮಕವಾಗಿಯೂ ಪರಸ್ಪರ ನಿಂತುಕೊಳ್ಳುವ ಸಂಧರ್ಭವನ್ನು ಸೃಷ್ಟಿಸುವಂತೆ ಮಾಡಿವೆ. ಉದಾಹರಣೆಗೆ ಯುದ್ಧದ ಸಂಧರ್ಭದಲ್ಲಿ ಮಿತ್ರ ರಾಷ್ಟ್ರಗಳು ಒಟ್ಟಾಗಿ ಪಾಲ್ಗೊಳ್ಳುವುದು. ಜಗತ್ತಿನ ಪ್ರತಿ ಗ್ರಾಹಕರ ಅಭಿರುಚಿಯನ್ನು ಪೂರ್ಣಗೊಳಿಸುವ ನಿಟ್ಟಿನಲ್ಲಿ ಜಾಗತಿಕ ಮಾರುಕಟ್ಟೆಯ ಪ್ರಾಮುಖ್ಯತೆಯು ಮುಖ್ಯವಾಗಿದೆ.

***ಭವಿಷ್ಯದ ದೃಷ್ಟಿಯಿಂದ ಜಾಗತಿಕ ಮಾರುಕಟ್ಟೆಯ ಅವಶ್ಯಕತೆಯನ್ನು ಕಾಣಬಹುದು***

ಅಂದರೆ ಯಾವುದೇ ಒಬ್ಬ ಅಥವಾ ಒಂದು ಉದ್ಯಮವು ಕೇವಲ ನಿರ್ದಿಷ್ಟ ಅವಧಿಗೆ ಮಾತ್ರ ಕಾರ್ಯನಿರ್ವಹಿಸುವುದಿಲ್ಲ. ಬದಲಿಗೆ ಹೊಸ ಹೊಸ ತಂತ್ರಜ್ಞಾನಗಳ ಬಳಕೆ, ಕೆಲಸದಲ್ಲಿ ಅಳವಡಿಕೆ ಮತ್ತು ದೇಶದ ಅಭಿವೃದ್ಧಿಯ ದೃಷ್ಟಿಯಿಂದ ಸದಾ ಜೀವಂತಿಕೆಯನ್ನು ಬಯಸುತ್ತದೆ. ಒಂದು ನಿರ್ದಿಷ್ಟ ಸ್ಥಳ

ಅಥವಾ ಪ್ರದೇಶ ಅಥವಾ ದೇಶಕ್ಕೆ ಸರಕು–ಸಾಮಗ್ರಿಗಳಾಗಲಿ, ತಂತ್ರಜ್ಞಾನಗಳಾಗಲಿ ಸೀಮಿತವಾಗುವುದಿಲ್ಲ. ಅದು ಎಲ್ಲರಿಗೂ ಅವಶ್ಯಕ. ಆದ ಕಾರಣ ಮನುಕುಲದ ಉಳಿಯುವಿಕೆಯ ಜೊತೆಯಲ್ಲಿಯೇ ಭವಿಷ್ಯದಲ್ಲಿನ ಬೇಡಿಕೆಯನ್ನು ಪರಿಪೂರ್ಣಗೊಳಿಸುವ ದೃಷ್ಟಿಯಿಂದ ಜಾಗತಿಕ ಮಾರುಕಟ್ಟೆಯ ಅವಶ್ಯಕತೆಯನ್ನು ಕಾಣಬಹುದಾಗಿದೆ.

***ಎಲ್ಲ ವರ್ಗದವರನ್ನು ಒಳಗೊಂಡ ಮಾರುಕಟ್ಟೆಯಾಗಿದೆ***

ಅಂದರೆ ದೈನಂದಿನ ಬದುಕಿನಲ್ಲಿ ಮೂಲ ಅವಶ್ಯಕ ಸಾಮಾಗ್ರಿಗಳನ್ನು ಹೊಂದುವಲ್ಲಿ ಮಾನವರು ಸಕ್ರೀಯರಾಗಿರುತ್ತಾರೆ. ಈ ನಿಟ್ಟಿನಲ್ಲಿ ಅಂತಹ ಸರಕುಗಳ ಖರೀದಿಗಾಗಿ ವ್ಯಾಪಾರ ವಿನಿಮಯವನ್ನು ನಡೆಸುತ್ತಾನೆ. ಹೀಗೆ ಪ್ರತಿ ಗ್ರಾಹಕನು ಕೂಡ ತನ್ನ ಅಗತ್ಯತೆಗಳನ್ನು ಪೂರೈಸಿಕೊಳ್ಳುವಲ್ಲಿ ವ್ಯಾಪಾರನ್ನು ಚಿಕ್ಕ ಮಾರುಕಟ್ಟೆಯಿಂದ ದೊಡ್ಡ ಮಾರುಕಟ್ಟೆಗೆ ಅಂತೆಯೇ ಜಾಗತಿಕ ಮಾರುಕಟ್ಟೆಯ ಕಡೆಗೆ ಒಲವನ್ನು ತೋರುತ್ತಾನೆ. ಹೀಗಿರುವಾಗ ಸರಕು ಸಾಮಾಗ್ರಿಗಳ ಅವಶ್ಯಕತೆ ಅನ್ನುವುದು ಜಾಗತಿಕವಾಗಿ ಎಲ್ಲ ವರ್ಗದವರನ್ನು ಒಳಗೊಂಡಿರುತ್ತದೆ. ಇಲ್ಲಿ ಯಾವುದೇ ಮತ, ಧರ್ಮ, ಲಿಂಗ ಅನ್ನದೇ ಎಲ್ಲರಿಗೂ ದೊರೆಯುವಂತಹ ಒಂದು ಬೃಹತ್ ಮಾರುಕಟ್ಟೆಯಾಗಿದೆ.

***ಹೊಸ ಹೊಸ ಪ್ರತಿಭೆಗಳಿಗೆ ಅವಕಾಶ***

ಉದ್ಯಮಗಳನ್ನು ಪ್ರಾರಂಭಿಸ ಬಯಸುವ ಸಾವಿರಾರು ನವ ಉದ್ಯಮಿಗಳಿಗೆ ಅವಕಾಶಗಳನ್ನು ನೀಡುತ್ತದೆ. ಆ ಮೂಲಕ ಅವರ ಉತ್ಪನ್ನಗಳಿಗೆ ಮಾರುಕಟ್ಟೆಯನ್ನು ನೀಡಿ ಅವರ ಪ್ರತಿಭೆಯನ್ನು ಜಾಗತಿಕವಾಗಿ ಎಲ್ಲ ಗ್ರಾಹಕರಿಗೆ ದೊರೆಯುವಂತೆ ಮಾಡುತ್ತದೆ. ಹೀಗೆ ಹೊಸ ಹೊಸ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವಲ್ಲಿ ಜಾಗತಿಕ ಮಾರುಕಟ್ಟೆಯು ಪ್ರಮುಖ ಪಾತ್ರ ವಹಿಸುತ್ತದೆ.

***ದೇಶದ ಆರ್ಥಿಕತೆಯ ಮೇಲೆ ಪರಿಣಾಮ ಬೀರುತ್ತದೆ***

ಜಾಗತಿಕ ಮಾರುಕಟ್ಟೆಯಲ್ಲಾಗುವ ವ್ಯಾಪಾರ ವಿಮಯಗಳು ಆಯಾ ದೇಶದ ಜಿ.ಡಿ.ಪಿ.ಯ ಮೇಲೆ ಪರಿಣಾಮ ಬೀರುತ್ತದೆ. ದೇಶೀಯ ಉತ್ಪನ್ನಗಳ ರಫ್ತು ಹೆಚ್ಚಿನ ಪ್ರಮಾಣದಲ್ಲಿ ಆದಾಗ ಆದಾಯವು ಸರಗವಾಗಿ ದೇಶದ ಮೂಲವನ್ನು ಸೇರುತ್ತವೆ. ಇಲ್ಲಿ ಆರ್ಥಿಕತೆಯ ಅಭಿವೃದ್ಧಿ ಎನ್ನುವುದು ಪ್ರತಿಯೊಬ್ಬ ನಾಗರೀಕರ ಶ್ರಮದ, ಪ್ರಾಮಾಣಿಕತೆಯಿಂದ ಕೂಡಿದ ದುಡಿಮೆಯ ಮೇಲೆ ಅವಲಂಭಿತವಾಗಿರುತ್ತದೆ.

***ತಂತ್ರಜ್ಞಾನಗಳ ಅಭಿವೃದ್ಧಿಗೆ ಸಹಾಯಕವಾಗಿದೆ***

ಇಂದು ತಂತ್ರಜ್ಞಾನದ ಯುಗ. ಪ್ರತಿಯೊಂದು ಡಿಜೀಟಿಕರಣದ ಅವಲಂಭನೆಯನ್ನು ಬಯಸುತ್ತಿವೆ. ಕುಂತಲೇ ಪ್ರಪಂಚದ ಯಾವುದೇ ಸ್ಥಳವನ್ನು, ವ್ಯಕ್ತಿಯನ್ನು ನೋಡುವ, ಮಾತನಾಡಿಸುವ ವ್ಯವಸ್ಥೆ ತಂತ್ರಜ್ಞಾನವು ತಂದು ಕೊಟ್ಟಿದೆ. ಹವಾಮಾನ ವೈಪರೀತ್ಯದ ಸೂಚ್ಯಂಕ, ಅಷ್ಟೇ ಅಲ್ಲದೇ ಬಾಹ್ಯಕಾಶಕ್ಕೆ ಜೀಗಿಯುವ, ಅನ್ಯ ಗ್ರಹಗಳಲ್ಲಿನ ಚಲನ ವಲನಗಳ ಬಗೆಗಿನ ತಾಂತ್ರಿಕ ಅರಿವು ಹೀಗೆ ಹಲವು ವಿದ್ಯಾಮಾನಗಳ ಬೆಳವಣಿಗೆಯಲ್ಲಿ ಒಂದು ದೇಶ ಇನ್ನೊಂದು ದೇಶದ ಅವಲಂಭನೆಯನ್ನು ಬಯಸುತ್ತದೆ. ಇವು ಸಕಾರಗೊಳ್ಳುವಲ್ಲಿ ಆಯಾ ದೇಶಗಳ ವ್ಯಾಪಾರಿ ಸಂಬಂಧವು ಪ್ರಮುಖವಾಗಿದೆ. ಉದಾಹರಣೆಗೆ

***ದೇಶ ದೇಶಗಳ ನಡುವಣ ವ್ಯಾಪಾರ ಸಂಬಂಧವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.***

ಜಾಗತಿಕ ಮಾರುಕಟ್ಟೆ ಎಂಬುವುದು ಪ್ರಪಂಚದಾದ್ಯಂತ ಇರುವ ಎಲ್ಲ ವ್ಯಾಪಾರಸ್ಥರನ್ನು ಗಣನೆಗೆ ತೆಗೆದುಕೊಳ್ಳುವ ಮೂಲಕ ಅಂತರರಾಷ್ಟ್ರೀಯ ಮಟ್ಟದಲ್ಲೂ ವಿಸ್ತರಿಸುತ್ತದೆ. ಮುಂದುವರಿದು ದೇಶಿಯ ಮಾರುಕಟ್ಟೆ ಅವಲಂಭನೆಯನ್ನು ಕಡಿಮೆಗೊಳಿಸಿ ಗ್ರಾಹಕರ ಅಭಿರುಚಿಯನ್ನು ಪರಿಪೂರ್ಣಗೊಳಿಸುವಲ್ಲಿ ವ್ಯವಸ್ಥಿತವಾದ ಪರಿಸರವನ್ನು ಸೃಷ್ಟಿಸುತ್ತದೆ. ಉದಾಹರಣೆಗೆ ಹೊರ ದೇಶಗಳಲ್ಲಿ ಅಥವಾ ಸ್ವದೇಶದಲ್ಲಿ ಉತ್ಪಾದನೆಯಾಗುವ ಆಹಾರ ಪದಾರ್ಥಗಳ ಸರಬರಾಜು.

ಹೀಗೆ ಜಾಗತಿಕ ಮಾರುಕಟ್ಟೆಯ ಪ್ರಾಮುಖ್ಯತೆಯು ಒಂದಿಲ್ಲೊಂದು ಕಾರಣವಾಗಿ ಇಂದು ಎಲ್ಲಾ ದೇಶಗಳಿಗೂ ಬೇಕಾದ ಬಹುಬೇಡಿಕೆಯ ಮಾರಾಟದ ಸ್ಥಳವಾಗಿದೆ.

**ದಲಿತ ಉದ್ಯಮಶೀಲತೆ**

ಉದ್ಯಮಶೀಲತೆ ಎಂದರೇನು ಎಂದು ತಿಳಿದುಕೊಂಡ ನಂತರದಲ್ಲಿ ದಲಿತ ಉದ್ಯಮಶೀಲತೆಯ ಬಗೆಗಿನ ಚರ್ಚೆಯು ಇಲ್ಲಿ ಸೂಕ್ತವೆನಿಸುತ್ತದೆ. ಒಬ್ಬ ವ್ಯಕ್ತಿ ಅಥವಾ ಸಂಸ್ಥೆಯು ತನ್ನ ಭವಿಷ್ಯದ ದೃಷ್ಟಿಯಿಂದ ವ್ಯಾಪಾರ ಮೂಲಕ ಲಾಭವನ್ನು ಗಳಿಸುವ ಒಂದು ಪ್ರಕ್ರಿಯೆಯಾಗಿದೆ. ಇಲ್ಲಿ ಉದ್ಯಮ ನಡೆಸಬಯಸುವ ವ್ಯಕ್ತಿಯು ಎಲ್ಲಾ ರೀತಿಯ ಲಾಭ ಅಥವಾ ನಷ್ಟಗಳಿಗೆ ತಯಾರಾಗಿರಬೇಕಾದ ಅನಿವಾರ್ಯತೆ ಇರುತ್ತದೆ. ಹೊಸದಾದ ಪರಿಕಲ್ಪನೆಯೊಂದಿಗೆ ಪ್ರಾಪಂಚಿಕವಾಗಿ ಗುರುತಿಸಿಕೊಳ್ಳುವ ಸಲುವಾಗಿ ಉದ್ಯಮದಲ್ಲಿ ತೊಡಗಿ ನಿರಂತರವಾದ ಕಾರ್ಯಚಟುವಟಿಕೆಯಲ್ಲಿ ಪ್ರವೃತ್ತನಾಗಿರಬೇಕು. ಅಂತಹ ವ್ಯವಸ್ಥೆಯನ್ನು ಉದ್ಯಮಶೀಲತೆ ಎಂದು ಕರೆಯಲಾಗುತ್ತದೆ. ಇಲ್ಲಿ ಉತ್ಪನ್ನದ ಗುಣಮಟ್ಟ, ಗಾತ್ರ, ಪ್ರಮಾಣ, ಸಂಖ್ಯೆ ಮತ್ತು ಅವಧಿಯು ಮುಖ್ಯವಾಗುತ್ತದೆ. ಜೊತೆಗೆ ಗ್ರಾಹಕರ ಅಭಿರುಚಿಯನ್ನು ಅದು ತೃಪ್ತಿಪಡಿಸಬಲ್ಲದೇ ಎಂಬುದನ್ನು ತಿಳಿಯುವುದು ಅವಶ್ಯಕ. ಈ ಬಗೆಯಲ್ಲೇ ಪ್ರಪಂಚದಾದ್ಯಂತ ವ್ಯಾಪಾರಸ್ಥರು ಕಾರ್ಯನಿರ್ವಹಿಸುತ್ತಾರೆ. ಇಲ್ಲಿನ ಪ್ರಮುಖ ವಿಷಯವೆಂದರೆ ಉದ್ಯಮಶೀಲತೆಯಲ್ಲಿ ಯಶಸ್ವಿಯಾಗಿರುವವರ ಸಂಖ್ಯೆಯಲ್ಲಿ ದಲಿತೇತರರನ್ನು ಹೆಚ್ಚಾಗಿ ಕಾಣಬಹುದು. ಇದರ ಹೊರತಾಗಿ ದಲಿತರು ಉದ್ಯಮದಲ್ಲಿ ತೊಡಗಿರುವರೇ?, ಉದ್ಯಮದಲ್ಲಿ ಯಶಸ್ಸಿನ ಮೆಟ್ಟಿಲನ್ನು ಮುಟ್ಟಿದ್ದಾರೆಯೇ?, ಉದ್ಯಮಶೀಲರಾಗಲು ಅವಕಾಶಗಳಿವೆಯೇ? ಎಂಬಿತ್ಯಾದಿ ಚರ್ಚೆಗಳು 'ದಲಿತ ಉದ್ಯಮಶೀಲತೆ' ಎಂಬ ಪದವನ್ನು ಬಳಸಿದಾಗ ಮೂಡುವಂತಹ ಪ್ರಶ್ನೆಗಳಾಗಿವೆ.

'ದಲಿತ' ಎಂದರೆ ಸಮಾಜದಲ್ಲಿ ಆರ್ಥಿಕವಾಗಿ ಸದೃಡವಾಗಿಲ್ಲದ, ಜಾತಿ, ಧರ್ಮ, ಲಿಂಗದ ಕಾರಣದಿಂದ ಸಾಮಾಜಿಕವಾಗಿ ಹಿಂದುಳಿದಿರುವವರಾಗಿದ್ದಾರೆ. ವಿಶೇಷವಾಗಿ ಭಾರತದಂತಹ ದೇಶದಲ್ಲಿ ಇಂತಹ ಸಮಸ್ಯೆಗಳು ಕಾಣುತ್ತವೆ. ವರ್ಣ, ವರ್ಗದ ಆಧಾರದಲ್ಲಿ ಶ್ರೇಣಿಕರಣ ವ್ಯವಸ್ಥೆಯ ಮೂಲಕ ತಳ ಸಮುದಾಯದವರನ್ನು ತುಳಿಯಲಾಗಿದೆ. ಇಂದು ಇದೇ ಸಮುದಾಯದವರು ಕೂಡ ಉದ್ಯಮದಲ್ಲಿ ತೊಡಗಿ ಯಶಸ್ವಿಯಾಗಿದ್ದಾರೆ. ಉದ್ಯಮ ನಿರ್ವಹಣೆಯು ಏಕಮುಖವಾಗಿರುವುದಿಲ್ಲ. ಅದರಲ್ಲಿ ಎಲ್ಲ ವರ್ಗದವರು ಕೂಡ ಒಳಗೊಂಡಿರುತ್ತಾರೆ. ಉದಾಹರಣೆಗೆ ಆಹಾರ ಪದಾರ್ಥದ ಉತ್ಪಾದಕ ತನ್ನ ಉತ್ಪನ್ನವನ್ನು ಸೀಮಿತ ಜಾತಿಗೆ ಮಾತ್ರ ಉತ್ಪಾದಿಸಿ ಮಾರಾಟ ಮಾಡಲು ಸಾಧ್ಯವಿಲ್ಲ. ಲಾಭವನ್ನು ಬಯಸಿದ ಪ್ರತಿ ವ್ಯಾಪಾರಗಾರರು

ದೈನಂದಿನ ಬದುಕಿನಲ್ಲಿ ಯಶಸ್ಸನ್ನು ಕಾಣಬಯಸುತ್ತಾರೆ. ಅದಕ್ಕಾಗಿ ತನ್ನ ಸೀಮಿತತೆಯಿಂದ ಹೊರನಡೆಯಬೇಕಾದದ್ದು ಅತ್ಯವಶ್ಯಕವಾಗಿದೆ. ಆದಾಗ್ಯೂ ಉದ್ಯಮಶೀಲತೆಯ ಕ್ಷೇತ್ರಯಲ್ಲಿ ಯಶಸ್ವಿಯಾದ ಕೆಲವೊಂದು ದಲಿತ ಉದ್ಯಮಿಗಳನ್ನು ಕಾಣುವುದಾದರೆ,

ಕಮಾನಿ ಟ್ಯೂಬ್‌ನ ಅಧ್ಯಕ್ಷೆಯಾದ ಕಲ್ಪನಾ ಸರೋಜ್, ಅಶೋಕ್ ಖಾಡೆ–ಡಿ.ಎ.ಎಸ್. ಆರ್ಫ ಸೋರ್ ಎಂಜಿನಿಯರಿಂಗ್ ಸಂಸ್ಥೆಯ ಸಿ.ಇ.ಒ, ಮಿಲಿಂದ್ ಕಾಂಬ್ಲೆ–ಫಾರ್‌ಚೂನ್ ಕನ್ಸ್ಟ್ರಕ್ಸನ್ ಕಂಪೆನಿಯ ಸಿ.ಎಂ.ಡಿ, ಸವಿತಾಬೆನ್–ಕೋಸ್ವಲಾ ಟೈಲ್ಸ್ ಉತ್ಪಾದಕರು, ಸಂಜಯ್ ಕ್ಷೀರ್ ಸಾಗರ್, ನಾಥನ್ ರಾಮ್, ಡಾ॥ ಸುಹಾಂತ್ ಮೇಶ್ರಾಮ್, ಅವಿನಾಶ್ ಜಗತಾಪ್, ಮಲ್ಕೈತ್ ಚಂದ್ ಇನ್ನು ಮೊದಲಾದವರು ಉದ್ಯಮಶೀಲತೆಯಲ್ಲಿ ಯಶಸ್ವಿಯಾಗಿ ಜಾಗತಿಕ ಮಾರುಕಟ್ಟೆಯಲ್ಲಿಯೂ ಗುರುತಿಸಿಕೊಂಡಿದ್ದಾರೆ. ದೇಶದ ಆರ್ಥಿಕಾಭಿವೃದ್ಧಿಯಲ್ಲೂ ಇವರ ಕೊಡುಗೆ ಅಪಾರ. ಇವರೆಲ್ಲರೂ ಬಾಲ್ಯದಿಂದಲೇ ಶ್ರೀಮಂತರಾದವರಲ್ಲ. ಬದಲಾಗಿ ಬಡತನವನ್ನು ತಮ್ಮ ಜೀವನದಿಂದ ಹೊರಹಾಕಿ ದೇಶದಲ್ಲಿ ತಮ್ಮ ಅಸ್ಥಿತ್ವವನ್ನು ಕಠಿಣ ಪರಿಶ್ರಮದ ಮೂಲಕ ಉದ್ಯಮ ಕ್ಷೇತ್ರದಲ್ಲಿ ಯಶಸ್ವಿಗೊಳಿಸುವ ಮೂಲಕ ಜಗತ್ತಿಗೆ ಪರಿಚಯಿಸಿಕೊಟ್ಟರು. ಉದ್ಯಮ ಎಂಬುದು ಎಲ್ಲ ವರ್ಗಗಳಿಗೂ ಇರುವಂತಹ ಸ್ವ ಉದ್ಯೋಗ ಸೃಷ್ಟಿಸಿಕೊಳ್ಳುವ ಕ್ಷೇತ್ರವಾಗಿದೆ. ಇಲ್ಲಿ ಜಾತಿ ಲೆಕ್ಕಾಚಾರವನ್ನು ಬಿಟ್ಟು ತಂತ್ರಜ್ಞಾನ ಮತ್ತು ಪ್ರತಿಭೆಗೆ ಮನ್ನಣೆ ನೀಡಬೇಕಾದದ್ದು ಅತಿ ಮುಖ್ಯವಾಗಿದೆ. ಉದಾಹರಣೆಗೆ ಮಹಾರಾಷ್ಟ್ರದ ಅಕೋಲಾದ ಒಂದು ಪುಟ್ಟ ಗ್ರಾಮದಲ್ಲಿ ಬೌದ್ಧ ಕುಟುಂಬದವರಾಗಿ ಜನಿಸಿದ ಕಲ್ಪನಾ ಸರೋಜ್‌ರವರು ಕಡುಬಡತನದಲ್ಲಿ ಜೀವನನಡೆಸುತ್ತಿದ್ದರು. ತಂಧೆ ಬಾಲ್ಯ ವಿವಾಹ ಮಾಡಿದರು. ಆದರೆ ಗಂಡನ ಮನೆಯವರ ಕಿರುಕುಳದಿಂದ ಬೆಸತ್ತು ಮತ್ತೆ ತಂದೆ ಮನೆ ಸೇರಿಕೊಂಡರು. ಆದರೂ ಊರಿನ ಜನರು ಆಕೆಯನ್ನು ಬಹಿಷ್ಕಾರಿಸಿದಾಗ ಆತ್ಮಹತ್ಯೆಗೂ ಪ್ರಯತ್ನಪಟ್ಟರು. ಅಂತಿಮವಾಗಿ ಬಾಂಬೆಗೆ 16ನೇ ವಯಸ್ಸಿನಲ್ಲಿ ಬಂದ ಇವರು ಜೀವನ ಸುಧಾರಣೆಗೆ ಗಾರ್ಮೆಂಟ್ಸ್ ಕಾರ್ಖಾನೆಯಲ್ಲಿ ಕೆಲಸ ಮಾಡಲು ಪ್ರಾರಂಭಿಸಿದರು. ಮುಂದೆ ಸರ್ಕಾರದ ಸಾಲ ಯೋಜನೆ ಬಳಸಿಕೊಂಡು ಸ್ವಂತ ಟೈಲರಿಂಗ್ ಮತ್ತು ಪೀಠೋ[ಕರಣದ ಅಂಗಡಿಯನ್ನು ನಡೆಸಿ ಯಶಸ್ವಿಯಾದರು. ಇದು ಅವರನ್ನು ಇನ್ನಷ್ಟು ಉದ್ಮಶೀಲಳನ್ನಾಗಿ ಮಾಡಲು ಹುರಿದುಂಬಿಸಿತು. ನಂತರದಲ್ಲಿ ರಿಯಲ್ ಎಸ್ಟೇಟ್, ಸಿನಿಮಾ ನಿರ್ಮಾಣ, ಉದ್ಯಮಶಿಲತಾ ಕಾರ್ಯಕ್ರಮದಲ್ಲಿ ಕೌಶಲ್ಯಾಧಿಕಾರಿಯಾಗಿ ಪ್ರಸಿದ್ದಿ ಹೊಂದುತ್ತಾ ಹೋದರು. ಇಂದು ಕಮಾನಿ ಟ್ಯೂಬ್ಸ್‌ನ ಮಾಲೀಕರಾಗಿ ಸುಮಾರು 1000 ಕೋಟಿಯ ಆಸ್ತಿಯನ್ನು ಹೊಂದಿದ್ದಾರೆ. 2013ರ ಸಾಲಿನಲ್ಲಿ ಪದ್ಮಶ್ರೀ ಪ್ರಶಸ್ತಿಗೂ ಭಾಜನರಾಗಿದ್ದಾರೆ. ಇವರಂತೆ ಅನೇಕ ದಲಿತ ಉದ್ಯಮಿಗಳು ಉದ್ಯಮ ಕ್ಷೇತ್ರದಲ್ಲಿ ಯಶಸ್ವಿಯಾಗಿ ಯುವ ಉದ್ಯಮಶೀಲರಿಗೆ ಮಾರ್ಗಸೂಚಿಯಾಗಿದ್ದಾರೆ. ಇದರಿಂದ ನಮಗೆ ತಿಳಿಯುವುದೇನೆಂದರೆ ಉದ್ಯಮಶಿಲತೆ ಎಂಬುದು ಪ್ರತಿಭೆಯನ್ನು ತೋರ್ಪಡಿಸುವ ಒಂದು ಬೃಹತ್ ಕ್ಷೇತ್ರ. ಇಲ್ಲಿ ಜಾಗತಿಕ ಮಾರುಕಟ್ಟೆ ಎಂಬುದು ಉದ್ಯಮಿಗಳ ಸರಕು ಸಾಮಗ್ರಿಗಳನ್ನು ವಿನಿಮಯ ಮಾಡಿಕೊಳ್ಳುವ ಒಂದು ನಿರ್ದಿಷ್ಟ ಸ್ಥಳ. ಇತ್ತಿಚಿನ ದಿನಗಳಲ್ಲಿ ತಂತ್ರಜ್ಞಾನದ ಅಳವಡಿಕೆಯಿಂದ ಇನ್ನಷ್ಟು ವಿಸ್ತರಿಸಿಕೊಂಡಿದೆ. ಹಾಗಾಗಿ ವ್ಯಾಪಾರಸ್ಥರ ವ್ಯವಹಾರ ವಹಿವಾಟನ್ನು ಮತ್ತುಷ್ಟು ಹೆಚ್ಚಿಸಿಕೊಳ್ಳುವ ಆ ಮೂಲಕ ಸಮಾಜದಲ್ಲಿ ಆರ್ಥಿಕ ಹಿನ್ನಡೆಯಿಂದ ಹೊರಬಂದು ಉತ್ತಮ ಜೀವನಶೈಲಿಯನ್ನು ಕಂಡುಕೊಳ್ಳುವ ಒಂದು ಮಾರ್ಗವೆಂದರೆ ತಪ್ಪಾಗಲಾರದು.

**ಜಾಗತೀಕ ಮಾರುಕಟ್ಟೆ ಮತ್ತು ದಲಿತ ಉದ್ಯಮಶೀಲತೆ ನಡುವಣ ಸಂಬಂಧ**

ಜಾಗತಿಕ ಮಾರುಕಟ್ಟೆಯೆಂಬುದು ಬೃಹತ್ ಆಕಾರದ ಸಮುದ್ರದಂತೆ. ಇಲ್ಲಿ ವ್ಯಾಪಾರಿ ಸಮಸ್ಯೆ, ಸವಾಲು, ಲಾಭ, ನಷ್ಟ, ಶ್ರಮದಂತಹ ಅನೇಕ ದೈನಂದಿನ ಕಾರ್ಯಚಟುಟಿಕೆಗಳು ಸಂಭವಿಸುತ್ತಲೇ ಇರುತ್ತದೆ. ಸರಕುಗಳನ್ನು ಕೊಳ್ಳುವ-ಮಾರುವವರು ಸೇರುವ ಸ್ಥಳೀಯ ಮಾರುಕಟ್ಟೆಯು ಜಾಗತಿಕವಾಗಿ ಬೆಳೆದ ನಂತರ ವ್ಯಾಪಾರ ಮತ್ತು ವ್ಯಾಪಾರಸ್ಥರ ನಡೆ ವಿಸ್ತರತೆಯನ್ನು ಹೆಚ್ಚಿಸಿಕೊಂಡಿತ್ತು. ಈ ನಡುವೆ ದಲಿತ ಉದ್ಯಮಶೀಲತೆಯು ಜಾಗತೀಕರಣದ ಲಾಭವನ್ನು ಪಡೆದು ತನ್ನ ವ್ಯಾಪಾರ ವಿನಿಮಯದ ವ್ಯಾಪ್ತಿಯನ್ನು ಇನ್ನಷ್ಟು ಹೆಚ್ಚಿಸಿಕೊಂಡಿದೆ. ಈ ಮೇಲೆ ಚರ್ಚಿಸಿದಂತೆ ಉದ್ಯಮದಲ್ಲಿ ಯಶಸ್ವಿಯಾದ ದಲಿತರು ತಮ್ಮ ಸಾಮಾಜಿಕ ಹಿನ್ನಲೆಯ ಹೊರತಾಗಿಯೂ ಕಠಿಣ ಪರಿಶ್ರಮದಿಂದ ಉದ್ಯಮದಲ್ಲಿ ಸಾಧನೆಯನ್ನು ಕೈಗೊಂಡು ನವ ಉದ್ಯಮಿಗಳಿಗೆ ಸ್ಫೂರ್ತಿಗಳಾಗಿದ್ದಾರೆ. ಇಂದು ಇವರು ದೇಶದ ಆರ್ಥಿಕಾಭಿವೃದ್ಧಿಯಲ್ಲಿ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾವರಾಗಿದ್ದಾರೆ. ಜಾಗತಿಕ ಮಾರುಕಟ್ಟೆಯು ದಲಿತೋದ್ಯಮಿಗಳಿಗೆ ಒಂದು ರೀತಿಯಲ್ಲಿ ನೂತನ ತಂತ್ರಜ್ಞಾನದ ಅಳವಡಿಕೆಯ ಮೂಲಕ ಪೂರಕವಾಗಿ ಇದ್ದರೂ, ಮತ್ತೊಂದೆಡೆ ಜಾತಿ ಸವಾಲುಗಳ ಮೂಲಕ ಮತ್ತೆ ಹಿಂದುಳಿಯುವಂತೆ ಮಾಡಬಹುದಾದ ಸಾಧ್ಯತೆಯು ಇದೆ ಎಂದರೆ ತಪ್ಪಗಲಾರದು. ಇಂತಹ ಅನೇಕ ಪರಿಣಾಮಗಳ ಹೊರತಾಗಿಯೂ ಯಶಸ್ಸನ್ನು ಕಂಡವರನ್ನು ಈ ಮೊದಲೇ ಚರ್ಚಿಸಿದ್ದೇವೆ. ಜಾಗತಿಕ ಮಾರುಕಟ್ಟೆಯು ದಲಿತ ಉದ್ಯಮಿಗಳಿಗೆ ಉದ್ಯಮ ಕ್ಷೇತ್ರದಲ್ಲಿ ಯಶಸ್ಸನ್ನು ಕಂಡುಕೊಳ್ಳಲು ಇರುವಂತಹ ಸುಲಭವಾದ ಕ್ಷೇತ್ರವಲ್ಲ. ಆದರೆ ಕಠಿಣ ಪರಿಶ್ರಮ, ನವೀನತೆ, ಚಾಣಕ್ಷತನವನ್ನು ಉದ್ಯಮ ಕ್ಷೇತ್ರದಲ್ಲಿ ಬಳಸಿಕೊಂಡಾಗ ಮಾತ್ರ ತಮ್ಮ ಪ್ರತಿಭೆಗೆ ತಕ್ಕಂತಹ ಯಶಸ್ಸನ್ನು ಗಳಿಸಲು ಸಾಧ್ಯ. ಅಂತಹ ಸವಾಲುಗಳ ಅನಾವರಣವನ್ನು ತಿಳಿಯುವುದು ಅವಶ್ಯಕ. ಈ ನಿಟ್ಟಿನಲ್ಲಿ ಜಾಗತಿಕ ಮಾರುಕಟ್ಟೆಯಲ್ಲಿ ದಲಿತ ಉದ್ಯಮಿಯು ಎದುರಿಸಬಹುದಾದ ಕೆಲವೊಂದು ಸವಾಲುಗಳನ್ನು ಈ ಕೆಳಗಿನಂತೆ ತಿಳಿಸಲಾಗಿದೆ.

**ಜಾಗತಿಕ ಮಾರುಕಟ್ಟೆಯಲ್ಲಿ ದಲಿತ ಉದ್ಯಮಶೀಲತೆಯು ಎದುರಿಸಬಹುದಾದ ಸವಾಲುಗಳು**

1. ಜಾಗತಿಕ ಮಾರುಕಟ್ಟೆಯು ಪರಸ್ಪರ ನಂಬಿಕೆ, ವಿಶ್ವಾಸಗಳ ಮೇಲೆ ನಡೆಯುವುದರಿಂದ ಇಲ್ಲಿ ಜಾತಿ ಮನಸ್ಸುಗಳು ಶ್ರೇಷ್ಠತೆಯ ಭಾವನೆಯಲ್ಲಿ ವಾಣಿಜ್ಯೀಕರಣವನ್ನು ಸಹಿಸುವುದು ಕಷ್ಟಸಾಧ್ಯ.
2. ಜಾಗತಿಕ ಮಾರುಕಟ್ಟೆಯಲ್ಲಿ ದಲಿತೋದ್ಯಮಿಗಳು ಎದುರಿಸುವ ಪ್ರಮುಖ ಸಮಸ್ಯೆಯಲ್ಲಿ ಬಂಡವಾಳದ ಸಮರ್ಪಕ ಬಳಕೆಯು ಒಂದು.
3. ಜಾಗತಿಕ ಮಾರುಕಟ್ಟೆಯು ದಲಿತ ಉದ್ಯಮಿಗಳನ್ನು ಸಂಪ್ರದಾಯದಡಿಯಲ್ಲಿ ಇನ್ನಷ್ಟು ತೂರುವ ಸಂಭವ ಹೆಚ್ಚು.
4. ಜಾಗತಿಕ ಮಾರುಕಟ್ಟೆಯಲ್ಲಿ ತಾಂತ್ರಿಕತೆಯ ಸಮರ್ಪಕ ಬಳಕೆಯ ಹೊರತು ವ್ಯಾಪಾರಿ ಹಿನ್ನಡೆಯ ಸಂಭವ ಹೆಚ್ಚು.
5. ಉದ್ಯೋಗಾವಕಾಶ ಸೃಷ್ಟಿಸಿಕೊಳ್ಳುವ ಸಮಯದಲ್ಲಿ ಜಾತಿ ಸಮಸ್ಯೆ ಉಲ್ಬಣವಾದರೆ, ಅದು ಉದ್ಯಮಶೀಲತೆಯ ಅವನತಿಗೆ ಕಾರಣವಾಗಬಹುದು.

6. ಪೈಪೋಟಿಯ ಯುಗದಲ್ಲಿ ಕೌಶಲ್ಯದ ಕೊರತೆಯಿಂದಾಗಿ ನವ ದಲಿತೋದ್ಯಮಿಗಳು ವ್ಯಾಪಾರದಲ್ಲಿ ನಷ್ಟ ಹೊಂದುವ ಸಂಭವ ಹೆಚ್ಚಾಗಿರುತ್ತದೆ.
7. ಜಾಗತಿಕ ಮಾರುಕಟ್ಟೆಯು ಸಂಪ್ರದಾಯವಾದಿತ್ವಕ್ಕೆ ಹೆಚ್ಚಿನ ಮನ್ನಣೆ ನೀಡಲಾರದು.
8. ಜಾಗತಿಕ ಮಾರುಕಟ್ಟೆಯಿಂದ ಸೃಷ್ಟಿಯಾದ ದೇಶ–ದೇಶದ ಮಿತ್ರತ್ವವೂ ಶತ್ರು ರಾಷ್ಟ್ರಗಳ ಮೇಲೆ ಯುದ್ಧದ ಭೀಕರತೆಯನ್ನು ಪರಿಚಯಿಸಬಹುದು.
9. ಜಾಗತಿಕ ಮಾರುಕಟ್ಟೆಯಲ್ಲಿ ತೊಡಗಿರುವ ಪಟ್ಟ ಸಂಪ್ರದಾಯವಾದಿಗಳು ನವ ದಲಿತೋದ್ಯಮಿಗಳ ಒಳಗೊಳ್ಳುವಿಕೆಯನ್ನು ಸಹಿಸದೇ ಅವರ ನಡುವಿನ ವ್ಯಾಪಾರ ವಿನಿಮಯದಿಂದ ಹಿಂದೆ ಸರಿಯುವ ಸಂಭವ ಹೆಚ್ಚು.
10. ಜಾಗತಿಕ ಮಟ್ಟದಲ್ಲಿ ತನ್ನ ಮಾರುಕಟ್ಟೆಯನ್ನು ಯಶಸ್ವಿಗೊಳಿಸಬೇಕಾದರೆ ಭಾಷಾ ನೈಪುಣ್ಯತೆಯನ್ನು ಬೆಳೆಸಿಕೊಳ್ಳುವುದು ಅನಕ್ಷರಸ್ಥ ವ್ಯಾಪಾರಸ್ಥರಿಗೆ ಕಷ್ಟಸಾಧ್ಯ.
11. ಸ್ಥಳೀಯ ವ್ಯಾಪಾರಸ್ಥರು ಜಾಗತಿಕವಾಗಿ ವಹಿವಾಟು ನಡೆಸಲು ಬೇಕಾದ ಮಾರುಕಟ್ಟೆ ಬಗೆಗಿನ ಮಾಹಿತಿ ಕೊರತೆ.
12. ದಲಿತ ಸಮುದಾಯಕ್ಕೆ ಪ್ರಮುಖವಾಗಿ ಉದ್ಯೋಗ ಮತ್ತು ಉದ್ಯಮಶೀಲತೆಯ ಆಯ್ಕೆಯಲ್ಲಿನ ಗೊಂದಲ.

**ಪರಿಹಾರೋಪಾಯಗಳು**

1. ಜಾಗತಿಕ ಮಾರುಕಟ್ಟೆಯಲ್ಲಿ ದಲಿತ ಉದ್ಯಮಶೀಲತೆಯ ಪಾತ್ರವು ಮುಖ್ಯವೆಂದು ಪರಿಗಣಿಸುವುದು.
2. ಜಾಗತಿಕ ಮಾರುಕಟ್ಟೆಯು ಪರಸ್ಪರ ನಂಬಿಕೆ, ವಿಶ್ವಾಸಗಳ ಮೇಲೆ ವ್ಯವಹಾರವನ್ನು ನಡೆಸುವುದರಿಂದ ವ್ಯಾಪಾರದಲ್ಲಿ ಯಶಸ್ಸನ್ನು ಕಾಣಬಯಸುವ ಪ್ರತಿ ಉದ್ಯಮಿಯು ಜಾತಿ ಮನಸ್ಥಿತಿಯಿಂದ ಹೊರಬರುವುದು ಸೂಕ್ತ.
3. ಸರ್ಕಾರದ ವತಿಯಿಂದ ದಲಿತ ಸಮುದಾಯವನ್ನು ಉದ್ಯಮಶೀಲತೆಯತ್ತ ಸೆಳೆಯಲು ಕಾನೂನು ರೀತ್ಯಾ ಸೂಕ್ತ ಕ್ರಮಗಳನ್ನು ಇನ್ನಷ್ಟು ತೆಗೆದುಕೊಳ್ಳುವುದು
4. ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳು ದಲಿತ ಸಮುದಾಯಗಳ ಸಬಲೀಕರಣಕ್ಕಾಗಿ ಉದ್ಯಮ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ಹೆಚ್ಚು ಹೆಚ್ಚು ನಡೆಸುವುದು.
5. ದಲಿತ ಸಮುದಾಯಗಳು ತಮ್ಮ ಜಾತಿ ಪೂರ್ವಗ್ರಹಿಕೆಯನ್ನು ತೊಡೆದುಹಾಕಿ ಸಮಾಜದಲ್ಲಿ ಉದ್ಯಮಗಳನ್ನು ಸ್ಥಾಪಿಸಿ ಮುನ್ನಡೆಸುವುದು ಸೂಕ್ತ.
6. ಉದ್ಯಮದ ಸ್ಥಾಪನೆಯ/ಪ್ರಾರಂಭದ ಸಮಯದಲ್ಲಿ ಬಂಡವಾಳದ ಕೊರತೆ ನೀಗಿಸಲು ಸರ್ಕಾರವು ಕಡಿಮೆ ಬಡ್ಡಿದರದ, ಸಬ್ಸಿಡಿ ಆಧಾರಿತ ಸಾಲಯೋಜನೆಗಳ ಅನುಷ್ಠಾನವನ್ನು ನೀಡಿ ಪ್ರೋತ್ಸಾಹಿಸುವುದು.
7. ಜಾಗತಿಕ ಮಾರುಕಟ್ಟೆ ಸಂಬಂಧವು ವಿಶ್ವದಾದ್ಯಂತ ಶಾಂತಿಯನ್ನು ಸಾರುವ ಕೇಂದ್ರವಾದರೆ ಅದು ಮನುಕುಲದ ಮೇಲಾಗುವ ನಷ್ಟ ಸಂಭವನಿಯತೆಯನ್ನು ತಡೆಯಬಹುದು.

**ಲೇಖನದಲ್ಲಿ ಆದಂತಹ ಚರ್ಚೆಗಳ ಮೂಲಕ ಹೊರಬಂದ ಫಲಿತಗಳು**

1. ಉದ್ಯಮವೆಂಬುದು ಎಲ್ಲರಿಗೂ ತೆರೆದ ಸುಲಭವಾದ ಕ್ಷೇತ್ರವಾಗಿದೆ.
2. ದಲಿತರು ಕೂಡ ಉದ್ಯಮವನ್ನು ನಡೆಸಬಲ್ಲರು ಎಂಬುದನ್ನು ಯಶಸ್ವಿ ಉದ್ಯಮಶೀಲರ ಬಗೆಗಿನ ದ್ವಿತಿಯ ಮೂಲದಿಂದ ತಿಳಿಯಲಾಗಿದೆ.
3. ಜಾತಿ ಸಮಸ್ಸೆ ಎಂಬುದು ಎಂತಹ ಸಂದರ್ಭದಲ್ಲಾದರು ಯಶಸ್ವಿ ಉದ್ಯಮಿಯನ್ನು ದಿವಾಳಿಯನ್ನಾಗಿ ಮಾಡಬಲ್ಲದು.
4. ಜಾಗತಿಕ ಮಾರುಕಟ್ಟೆಯು ಪರಸ್ಪರ ನಂಬಿಕೆ, ವಿಶ್ವಾಸದ ಆಧಾರದಲ್ಲಿ ನಡೆಯುವ ಒಂದು ಬೃಹತ್ ಮಾರುಕಟ್ಟೆಯಾಗಿದೆ.
5. ಜಾಗತಿಕ ಮಾರುಕಟ್ಟೆ ಮತ್ತು ದಲಿತ ಉದ್ಯಮಶೀಲತೆ ಪರಸ್ಪರ ಪೂರಕವಾಗಿ ಕಾರ್ಯನಿರ್ವಹಿಸಬೇಕಾದ ಅನಿವಾರ್ಯತೆ ಇದೆ.
6. ಪ್ರಾಪಂಚಿಕವಾಗಿ ಗುರುತಿಸಿಕೊಳ್ಳುವ ತವಕ ಪ್ರತಿ ಉದ್ಯಮಶೀಲ ವ್ಯಕ್ತಿಯ ಒಂದು ಉತ್ತಮವಾದ ಗುರಿಯಾಗಿದೆ.
7. ಉದ್ಯಮ ಕ್ಷೇತ್ರದಲ್ಲಿ ಯಶಸ್ಸು ಎಂಬುದು ಲಿಂಗ, ಜಾತಿ ಎನ್ನುವುದನ್ನು ಪರಿಗಣಿಸುವುದಿಲ್ಲ. ಬದಲಾಗಿ ಪ್ರತಿಭೆಗೆ ಮಾತ್ರ ಅವಕಾಶವನ್ನು ಕಲ್ಪಿಸಿದೆ.
8. ಜಾತಿ ಮನಸ್ಸುಗಳು ಜಾಗತಿಕ ಮಾರುಕಟ್ಟೆಯನ್ನು ತಲುಪುವ ಮೂಲಕ ಹಿಂದುಳಿದವರನ್ನು ತುಳಿಯುವ ಸಂಭವನಿಯತೆ ಇದೆ ಎಂಬುದನ್ನು ತಿಳಿಯಬಹುದಾಗಿದೆ.

**ಉಪಸಂಹಾರ**

ಮಾರುಕಟ್ಟೆ ವ್ಯವಸ್ಥೆಯು ಭೌಗೋಳಿಕ ಪ್ರದೇಶ, ಜನಸಂಖ್ಯೆ, ಅಭಿರುಚಿ, ಅವಧಿ, ಸಾಮರ್ಥ್ಯ, ಸರಕಿನ ಪ್ರಮಾಣ, ಗಾತ್ರ, ವ್ಯಾಪ್ತಿ, ಆರ್ಥಿಕತೆಯ ಆಧಾರದಲ್ಲಿ ಆರಂಭವಾಗಿ ಇಂದು ಜಾಗತಿಕ ಮಟ್ಟದಲ್ಲಿ ಬೆಳೆದಿದೆ. ಇದಕ್ಕೆ ಮಾನವರ ದೈನಂದಿನ ಚಟುವಟಿಕೆಯಲ್ಲಾದ ಬದಲಾವಣೆ. ತನ್ನ ಅಗತ್ಯತೆಗೆ ಬೇಕಾದ ವಸ್ತುಗಳ ಮೇಲಿನ ಅವಲಂಭನೆ ಮತ್ತು ಬಳಕೆಯ ಸಲುವಾಗಿ ನಿರಂತರ ಪ್ರಯತ್ನವನ್ನು ಕೈಗೊಳ್ಳಲಾಗುತ್ತದೆ. ಇದರ ಜೊತೆಗೆ ತಂತ್ರಜ್ಞಾನದ ನೆರವನ್ನು ಕೂಡ ಬಳಸಿಕೊಳ್ಳಲಾಗಿದೆ. ಕೊಳ್ಳುವವರು ಮತ್ತು ಮಾರಾಟಗಾರು ಸೇರುವ ಒಂದು ನಿರ್ದಿಷ್ಟ ಸ್ಥಳ ಇಂದು ಜಾಗತಿಕವಾಗಿ ಅಭಿವೃದ್ಧಿ ಹೊಂದಿದೆ. ಇದರ ಜೊತೆಗೆ ಅಂತರ್ಜಲದ ಮೂಲಕವು ವಹಿವಾಟನ್ನು ಮಾಡಲಾಗುತ್ತಿದೆ. ಒಟ್ಟಾರೆ ಜಾಗತಿಕ ಮಾರುಕಟ್ಟೆ ಎಂಬುದು ಪ್ರಪಂಚದ ಎಲ್ಲಾ ಭಾಗದ ಜನರು ತಮ್ಮ ವ್ಯಾಪಾರವನ್ನು ಸುಲಲಿತವಾಗಿ ನಡೆಸಲು ಇರುವಂತಹ ವಿಶಾಲವಾದ ಮಾರುಕಟ್ಟೆಯಾಗಿದೆ ಎಂದು ತಿಳಿಯಬಹುದಾಗಿದೆ. ಆದರೆ ಭಾರತದಂತಹ ದೇಶದಲ್ಲಿ ವಿಶೇಷವಾಗಿ ದಲಿತರನ್ನೇ ಗುರಿಯಾಗಿಸಿಕೊಂಡು ನಡೆಸುವ ಹೀನ ಕೃತ್ಯಗಳು ಅವರನ್ನು ಆರ್ಥಿಕವಾಗಿ ಹಿನ್ನಡೆಯುವಂತೆ ಮಾಡಿದೆ. ಇದರ ಹೊರತಾಗಿಯೂ ಸಮಾಜದಲ್ಲಿ ತಮ್ಮನ್ನು ತಾವು ಗುರುತಿಸಿಕೊಂಡು ಯಶಸ್ವಿಯಾದ ದಲಿತ ಉದ್ಯಮಿಗಳು ನವ ಉದ್ಯಮಿಗಳನ್ನು ಮಾರುಕಟ್ಟೆ ಕ್ಷೇತ್ರದಲ್ಲಿ ದುಮುಕುವಂತೆ ಮಾಡಿದೆ. ಇದಕ್ಕೆ ಸರ್ಕಾರದಲ್ಲಿ ದೊರೆಯದಿರುವ ಉದ್ಯೋಗಾವಕಾಶಗಳು ಮತ್ತು ದಲಿತರಲ್ಲಿನ ಬಡತನ

ಮತ್ತು ಇಂದಿಗೂ ಕಾಡುತ್ತಿರುವ ಜಾತಿ, ಅಸ್ಪೃಶ್ಯತೆ ಸಮಸ್ಯೆಗಳು ಕಾರಣವಾಗಿದೆ. ಎಲ್ಲರಿಗೂ ಎಲ್ಲಾ ಕ್ಷೇತ್ರದಲ್ಲಿ ಸಿಗಬಹುದಾದ ಅವಕಾಶಗಳ ಸದ್ಬಳಕೆಯಿಂದ ಪ್ರತಿ ವ್ಯಕ್ತಿಯೂ ಯಶಸ್ಸನ್ನು ಕಾಣಬಹುದಾಗಿದೆ. ಇದರಲ್ಲಿ ಸರ್ಕಾರ ಮತ್ತು ಪ್ರಜೆಗಳ ಪಾತ್ರ ಬಹುಮುಖ್ಯವಾಗಿದೆ. ಸರ್ಕಾರದ ಯೋಜನೆಗಳ ಸಮರ್ಪಕ ಅಳವಡಿಕೆಯಿಂದ ಮಾತ್ರ ನಿರುದ್ಯೋಗ ಸಮಸ್ಯೆ ನಿವಾರಣೆಯಾಗಲು ಸಾಧ್ಯ. ಇಂತಹ ಅನೇಕ ಪೂರಕವಾದ ಉದಾಹರಣೆಗಳನ್ನು ಚರ್ಚಿಸಲಾಗಿದ್ದು, ಪ್ರಸ್ತುತ ಲೇಖನಕ್ಕೆ ಅಲ್ಪ ವಿರಾಮವನ್ನು ನೀಡಲಾಗಿದೆ.

**ಪರಾಮರ್ಶನ ಗ್ರಂಥಗಳು**


- Baweja, R., Bose, R., Mahajan, S., & Chugh, A. (2018–2019). Global marketing: What all it consists of, its importance and the factors affecting it. *International Journal of Management and Commerce Innovations*, *6*(2), 1243–1247. ISSN 2348-7585.
- Gowda, V. R., & Gonchikar, P. (2017). Dalit entrepreneurship: Problems and prospects with special reference to Dakshina Kannada District. *Pearl Multidisciplinary Journal*, *3*(1), 52–62.
- Kumar, D. (2025). Opportunities and challenges of Dalit entrepreneurship in India. *International Journal for Multidisciplinary Research (IJFMR)*, *7*(3). E-ISSN 2582-2160.
- Madaboyina, G. (2020). Dalit entrepreneurship in India: An overview. *Pramana Research Journal*, *10*(4). ISSN 2249-2976.
- Paramasivan, C., & Selvam, P. M. (2016). Economic violence against Dalit entrepreneurs in Tamil Nadu. *IJRDO – Journal of Business Management*, *2*(6), Paper 4. ISSN 2455-6661.